‘ಈ ಕೆಲಸದವರಿಗೆ ಊರಪುರಾಣ ಎಲ್ಲಾ ಬೇಕು... ಎಂದುಕೊಳ್ಳುತ್ತಾ ಧಿಮ್ಮನೆ ನೆತ್ತಿಯವರೆಗೆ ಸಿಟ್ಟು ಏರಿತ್ತು ಸರೋಜನಿಗೆ. ಬೆಳಬೆಳಗಾತ ಕೆಲಸಕ್ಕೆ ಬಂದು ಅಂಗಳ, ಬಾಗಿಲು ಗುಡಿಸಲು ಮೋಟು ಹಿಡಿಕುಂಟೆ ಕೈಗೆತ್ತಿಕೊಳ್ಳುವುದಕ್ಕೂ ಮುಂಚೆ ಪಿತ್ತ ಕೆರಳಿಸುವಂತೆ ಪ್ರಶ್ನೆ ಮಾಡಿದ್ದಳು ಶೇಷಿ, “ನಿನ್ನೇನೂ ಫೋನ್ ಇಲ್ಲಾ್ಯ ಸಣ್ಣಮ್ಮ? ಮಕ ನೋಡಿದ್ರೆ ಗೊತ್ತಾಗುತ್ತೆ...”

ಸರೋಜ ಆಗಷ್ಟೇ ಕೊಟ್ಟಿಗೆಯಿಂದ ಹಾಲು ಕರೆದುಕೊಂಡು ಒಳಗೆ ದಾಟುತ್ತಿದ್ದಳು. ನೊರೆಹಾಲು ತುಂಬಿದ್ದ ಕೌಳಿಗೆಯನ್ನು ಸೆರಗಿನಿಂದ ಮುಚ್ಚಿ ಹಿಡಿದಿದ್ದಳು. ಮೂರು ಹೊತ್ತು ಕರಿಕಾಫಿಗೆ, ಮಜ್ಜಿಗೆನೀರಿಗೆ ಸಾಕೂಸಾಲದಷ್ಟು ಹಾಲು ಕೊಡುತ್ತಿದೆ ಗಬ್ಬದ ದನ. ಇನ್ನೇನು ಮಾಲಿಸಿಕೊಳ್ಳುವ ದಿನ ದೂರ ಇಲ್ಲ. ಬಾಣಂತಿ ಮಗಳನ್ನು ಮನೆಗೆ ಕರೆದುಕೊಂಡು ಬಂದರೆ ದುಡ್ಡು ಕೊಟ್ಟು ಹಾಲು ಕೊಂಡು ತರಬೇಕು, ಇಲ್ಲಾ ಕರಾವಿಗೆ ಇನ್ನೊಂದು ದನವನ್ನೋ, ಎಮ್ಮೆಯನ್ನೋ ಕೊಳ್ಳಬೇಕು. ಮನೆಯಲ್ಲಿ ಸ್ವತಾ ಹಾಲು ಕರೆದು ಮೊಸರಿಗೆ ಹೆಪ್ಪಿಡುವುದು, ಕಡೆದ ಬೆಣ್ಣೆಯಿಂದ ತುಪ್ಪ ಕಾಸುವುದು ಅಂದರೆ ಅದರ ರುಚಿಯೇ ಬೇರೆ. ಮಗಳು ಊರು ಬಿಟ್ಟು ಪರವೂರಿಗೆ ಹೊರಟಾಗ ಎಳೆ ಬಸುರಿ. ಎರಡು ತಿಂಗಳು. ಎಷ್ಟೇ ಬೆರಳು ಮಡಚಿ ಲೆಕ್ಕ ಹಾಕಿದರೂ ಹೆರಿಗೆಯ ದಿನಗಳು ಹತ್ತಿರ ಬಂದಿವೆ. ‘ಬಾ ಅಮ್ಮಾ್...’ ಎನ್ನುವ ಒಂದು ಕರೆ ಕೇಳಲು ಕಾತರಿಸಿ ಕಾದಿದ್ದಾಳೆ ಸರೋಜ. ತಿಂಗಳ ಮಟ್ಟಿಗೆ ಮನೆ ನೋಡಿಕೊಳ್ಳಲು ಜನ ಕೂಡಾ ವ್ಯವಸ್ಥೆ ಮಾಡಿಟ್ಟಿದ್ದಾಗಿದೆ. ಮಗಳ ಹೆರಿಗೆ ಎಲ್ಲಾ ಸೌಲಭ್ಯಗಳೂ ಹತ್ತಿರದಲ್ಲಿರುವ ಪೇಟೆಯ ಆಸ್ಪತ್ರೆಯಲ್ಲಿ ನಡೆಯಲಿ ಎಂದು ಈ ಕಾಲದ ಎಲ್ಲರಂತೆ ಸರೋಜ ಕೂಡಾ ಅಪೇಕ್ಷೆಪಟ್ಟಿದ್ದಾಳೆ. ಹೆರಿಗೆಯ ಗಂಡಾಂತರ ಕಳೆಯಿತು ಅಂದರೆ ಮಗಳನ್ನು ಒಪ್ಪಿಸಿ ಹಳ್ಳಿಗೆ ಕರೆದುಕೊಂಡು ಬಂದು ಕೊನೇಪಕ್ಷ ಮೂರು ತಿಂಗಳಾದರೂ ಬಾಣಂತನ ಮಾಡಿ ಕಳಿಸಬೇಕು ಎಂದು ಕುತ್ತಿಗೆಯವರೆಗೆ ಆಸೆ ಇಟ್ಟುಕೊಂಡಿದ್ದಾಳೆ ಸರೋಜ. ಮನೆಮಗಳು ಬಸುರಿ ಎಂದು ಗೊತ್ತಾದಾಗಿನಿಂದ ವಾರವಾರ ಕಾಸಿದ ತುಪ್ಪ ಪಿಂಗಾಣಿ ಜಾಲಿಯಲ್ಲಿ ಶೇಖರವಾಗುತ್ತಾ ಬಂದಿದೆ. ಏನೇನು ತಯಾರಿ ಮಾಡಿಕೊಂಡಿಲ್ಲ ಸರೋಜ? ಅಟ್ಟದಿಂದ ಇಳಿಸಿದ ಕರಿಮರದ ತೊಟ್ಟಿಲನ್ನು ತಿಕ್ಕಿ ತಿಕ್ಕಿ ತೊಳೆದು ಬಿಸಿಲಲ್ಲಿ ಒಣಗಿಸಿಟ್ಟಿದ್ದಾಳೆ. ಮಗುವಿನ ಅಂಡಡಿಗೆ ಹಾಸಲು ಉಟ್ಟು ಬಿಟ್ಟ ಮೆತ್ತನೆಯ ಹತ್ತಿಸೀರೆಗಳನ್ನು ಚಪ್ಪರಿವೆಗಂಟಿನಿಂದ ತೆಗೆದು ಸೋಪ್ ಪೌಡರು ಹಾಕಿದ ಕುದಿನೀರಲ್ಲಿ ನೆನೆಸಿ ಒಗೆದು ಗಣಗಣ ಒಣಗಿಸಿ ಮಡಚಿಟ್ಟಿದ್ದಾಳೆ. ಒಂದು ಡಬ್ಬ ಸೀಗೆಪುಡಿ ಕುಟ್ಟಿಸಿಟ್ಟಿದ್ದಾಳೆ. ಒಂದೊಂದು ದಿನ ಕಳೆದ ಹಾಗೂ ಪುಟ್ಟ ಕಂದ ಬರುವ ದಿನ ಹತ್ತಿರ ಹತ್ತಿರವಾಗುತ್ತಿದೆಯೆಂದು ಪುಲಕಗೊಂಡಿದ್ದವಳಿಗೆ ಮಗಳಿಂದ ಬರುವ ಕರೆಯ ನಿರೀಕ್ಷೆ. ಊರು ಬಿಟ್ಟು ಗಂಡನ ಬೆನ್ನು ಹತ್ತಿ ಹೋದವಳು ವಾರಕ್ಕೆ ಮೂರು ಸಲ ಫೋನ್ ಮಾಡುವ ಪದ್ಧತಿ ಇಟ್ಟುಕೊಂಡಿದ್ದಳು. ಇಬ್ಬರೂ ಗಂಟೆಗಟ್ಟಲೆ ಅನ್ನುವ ಹಾಗೆ ಕೊನೆಯ ಸಲ ಫೋನ್ ಮಾಡಿದಾಗಿನಿಂದ ಈಗ ಮಾಡುತ್ತಿರುವವರೆಗೆ ಏನೇನು ನಡೆಯಿತು ಎಂದು ಹಂಚಿಕೊಳ್ಳುತ್ತಿದ್ದರು, ಯಾರಾದರೂ ಕೇಳಿದರೆ ಇದೆಲ್ಲಾ ಫೋನಲ್ಲಿ ಮಾತಾಡುವಂತಾ ವಿಷಯವೇ ಎಂದು ನಗೆಯಾಡುವಷ್ಟು.

ಯಾರೋ ಕಣ್ಣು ಕಾಣದ ಊರಿನ ಹುಡುಗನ ಜೊತೆ ಮದುವೆಯಾಗುವ ಪ್ರಸ್ತಾಪ ಮಗಳಿಂದ ಬಂದಾಗ ಸರೋಜ ಕಡ್ಡಿ ಮುರಿದಂತೆ ನಿರಾಕರಿಸಿದ್ದು ಹೌದು. ಎಲ್ಲಾ ನೋಡಿ, ಕೇಳಿ, ವಿಚಾರಿಸಿ ಮಾಡಿದ ಮದುವೆಗಳೇ ಬರ್ಕತ್ತಾಗದೆ ಮುರಿದು ಬಿದ್ದ ಹಲವಾರು ಉದಾಹರಣೆಗಳು ಕಣ್ಣೆದುರಿಗಿರುವಾಗ ಗೊತ್ತಿಲ್ಲದ ಹುಡುಗನ ಜೊತೆ ಮಗಳ ಮದುವೆ ಕುದುರಿಸಲು ಅವಳು